5. ಚೀಲ, ಕಾಲ್ಚೀಲ ಮುಂತಾದವುಗಳಂತಹ ಮೂರು ಸಾಮಾನುಗಳನ್ನು ಜೆನ್ನಾಗಿ ಮಾಡಿ ಪೂರೈಸಿಕೊಡುವುದು.

6. ಮುಂದೆ ತಿಳಿಸುವುವುಗಳನ್ನು ಕತ್ತರಿಸಿ ಮಾಡುವುದಕ್ಕೆ ಶಕ್ತಿಯುಂಟೆಂದು ತೋರಿಸುವುದು :

(1) ಆರರಿಂದ ಹನ್ನೆರಡು ವರ್ಷ ವಯಸ್ಸಿನೊಳಗಿರುವ ಬಾಲೆಗೆ ಪೂರ್ಣ ಪ್ರಮಾಣದ ಬಂದು ಜಾಕೆಟ್ಟೆಂಬ ಅಂಗಿ ಮತ್ತು ಪೆಟಿಕೋಟೆಂಬ ಪಾವುಡೆ.

(2) ಆರರಿಂದ ಹನ್ನೆರಡು ವರ್ಷ ವಯಸ್ಸಿನೊಳಗಿರುವ ಬಾಲಕನಿಗೆ ಕತ್ತಿನಪಟ್ಟಿಯನ್ನೂ, ಜೋಬನ್ನೂ ಗುಂಡಿಯ ಕಾಜಾಗಳನ್ನೂ ಜೋಡಿಸುವ ಸನ್ನಿವೇಶವನ್ನು ತೋರಿಸುವಂತೆ ಬಂದು ಜಾಕೆಟ್ಟೆಂಬ ಅಂಗಿ ಮತ್ತು ಒಂದು ಟೋಪಿ.

(3) ನೇಟಿವ್ ಮನುಷ್ಯನ ಚಿಕ್ಕ ಜಾಕೆಟ್.

(4) ನೇಟಿವ್ ಮನುಷ್ಯನು ಒಳಗಡೆ ಹಾಕುವ ಜಾಕೆಟ್.

II

ಹೊಲಿಗೆಯನ್ನು ಕಲಿಸುವುದಕ್ಕೂ ಅರ್ಧ ಘಂಟೆಯು ಕಾಲ ಪಾಠಹೇಳುತ್ತಾ ಆ ಕಾಲದಲ್ಲಿ ತರಗತಿಯನ್ನು ಅಂಕೆಯಲ್ಲಿಟ್ಟುಕೊಂಡಿರುವುದಕ್ಕೂ ಶಕ್ತಿಯುಂಟೆಂಬುದನ್ನು ತೋರಿಸುವುದು (ಯಾವ ವಿಧವಾದ ಪಾಠವನ್ನು ಹೇಳಬೇಕು, ಅದನ್ನು ಯಾವ ತರಗತಿಗೆ ಹೇಳಬೇಕು ಎಂಬ ವಿಷಯವನ್ನು ಪರೀಕ್ಷಕರು ಗೊತ್ತುಮಾಡುವರು.)

7. ವಿದ್ಯಾರ್ಥಿಗಳು ಪರೀಕ್ಷಕರ ಇದಿರಿನಲ್ಲಿ ಕಡಿಗೆ ಹತ್ತು ಮಂದಿ ಬಾಲೆಯರಿಗೆ ಕಡಮೆ ಇಲ್ಲದ ತರಗತಿಗೆ ಹೊಲಿಗೆಯ ಪಾಠವನ್ನು ಪ್ರತ್ಯಕ್ಷವಾಗಿ ಹೇಳಿ ತೋರಿಸಬೇಕಾಗುವುದು.

8. ಅದಕ್ಕಾಗಿ ಗೊತ್ತುಮಾಡಿರುವ ಒಟ್ಟು ಸಂಖ್ಯೆಯಲ್ಲಿ ಸೇಕಡ ಐವತ್ತು ನಂಬರನ್ನು ಪಡೆದ ಹೊರತು ಯಾವ ವಿದ್ಯಾರ್ಥಿನಿಯೂ ಹೊಲಿಗೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿಳೆಂದು ಎಣಿಸಲ್ಪಡಲಾಗದು. ಪರೀಕ್ಷೆಯಲ್ಲಿ ತೇರ್ಗಡೆಯಾದವರೊಳಗೆ, ಒಟ್ಟು ಸಂಖ್ಯೆಯಲ್ಲಿ ಸೇಕಡ ಎಪ್ಪತ್ತೈದು ನಂಬರನ್ನು ಪಡೆದವರು ಮೊದಲನೆಯ ತರಗತಿಯಲ್ಲಿಯೂ, ಉಳಿದವರು ಎರಡನೆಯ ತರಗತಿಯಲ್ಲಿಯೂ ತೇರ್ಗಡೆಯಾದಂತೆ ಎಣಿಸಲ್ಪಡತಕ್ಕದ್ದು.

9. ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರು "ಹೊಲಿಗೆಯಲ್ಲಿ ಉಪಾಧ್ಯಾಯಿ. ಪ್ರಾವೀಣ್ಯ ನಿರ್ಣಾಯಕ ಪರೀಕ್ಷೆಯನ್ನು ಕೊಟ್ಟಿರುವರು" ಎಂದು ಯೋಗ್ಯತಾ ಪತ್ರಿಕೆಯನ್ನು ಪಡೆಯುವರಲ್ಲದೆ ಈ ಸಂಸ್ಥಾನದ ಬಾಲಿಕಾ ಪಾಠಶಾಲೆಗಳಲ್ಲಿ ಹೊಲಿಗೆಯನ್ನು ಹೇಳಿಕೊಡುವ ಉಪಾಧ್ಯಾಯಿನಿಯರಾಗಿರಲು ಯೋಗ್ಯರೆಂದು ಎಣಿಸಲ್ಪಡುವರು.

10. ಹೊಲಿಗೆಯ ಪ್ರಾವೀಣ್ಯ ಪರೀಕ್ಷೆಗೆ ಸೇರಿಸಿಕೊಳ್ಳಬೇಕೆಂದು ಬರೆದುಕೊಳ್ಳುವ ದರಖಾಸ್ತುಗಳು, ಪರೀಕ್ಷೆ ನಡೆಯುವುದಕ್ಕೆ ಹಿಂದಣ ಆಗಸ್ಟ್ 15ನೆ ತಾರೀಖಿಗೆ ಮಿಾರದೆ ಮೈಸೂರು ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ ತಲಪಬೇಕು. [ಈ ಸಂವತ್ಸರಕ್ಕೆ 30ನೆಯ ಸೆಪ್ಟೆಂಬರೇ ದರಖಾಸ್ತು ಕಳುಹಿಸುವ ಕಡೆಯದಿವಸವಾಗಿರುವುದು.]

11. ಪರೀಕ್ಷೆಗೆ ಸೇರಿಸಿಕೊಳ್ಳುವದಕ್ಕೆ ಫಿ 3 ರೂಪಾಯಿ.

12. ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದಿರುವ ವಿದ್ಯಾರ್ಥಿನಿಯು ಪೂರಾ ಫೀಯನ್ನು ಕೊಟ್ಟಮೇಲೆ ಮುಂದಣ ಪರೀಕ್ಷೆಗಳಿಗೆ ಸೇರಿಸಿಕೊಳ್ಳಲ್ಪಡುವಳು.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಫಾರೆಸ್ಟ್ಸ್ ಇಲಾಖಾ

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟ್, 1909

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೀಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದೆದರ ಬಾಜುದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.	ಹರಾಜಿಗೆ ಇಡಲಾಗುವ ಸಂದಲ್ ಮರಗಳು.	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್ ತಾರೀಖು 18	100	
2	ಡಿಟೋ ...	ಸಾಗರ ...	ಡಿಟೋ 22	100	
3	ಡಿಟೋ ...	ಶಿವಮೊಗ್ಗ ...	ಡಿಟೋ 25	500	
4	ಕಡೂರು ...	ತರೀಕೆರೆ ...	ಡಿಟೋ 29	(a)200	(a) ಚಿತ್ರದುರ್ಗದ 10 ಟ್ಯಗಳು ಕೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸಂಬರ್ ತಾರೀಖು 2	400	
6	ಹಾಸನ ...	ಹಾಸನ ...	ಡಿಟೋ 6	200	
7	ಕೆಂಗಳೂರು ...	ಕೆಂಗಳೂರು ...	ಡಿಟೋ 9	(b)100	(b) ತುಮಕೂರು 30 ಟ್ಯಗಳು ಕೋಲಾರದ 5 ಟ್ಯಗಳು ಕೇರಿರುತ್ತೆ.
8	ತುಮಕೂರು ...	ಶ್ರೀರಂಗಪಟ್ಟಣ ...	ಡಿಟೋ 13	250	
9	ಡಿಟೋ ...	ಹುಣಸೂರು ...	ಡಿಟೋ 16	450	
			ಜುಮ್ಲಾ ...	2,400	

ಎಂ. ಮುತ್ತಣ್ಣ,
ಕ್ವಸರ್ವೇಟರ್ ಆಫ್ ಫಾರೆಸ್ಟ್ಸ್, ಇ ಮೈಸೂರು.